# ಹಿರಿಯ ಸಿವಿಲ್ ನ್ಯಾಯಾಧೀಶರ , ನ್ಯಾಯಾಲಯ ಚಿಂಚೋಳಿ.

ಎಂ.ವಿ.ಸಿ ನಂ. 1154/2021

| | | |
|---|---|---|
| ಹೆಸರು | : | ರಾಜಶೇಖರ |
| ತಂದೆಯ ಹೆಸರು | : | ವಿಠ್ಠಲ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಇನ್ಸಪೆಕ್ಟರ, ಲೋಕಾಯುಕ್ತ ಕಲಬುರಗಿ |
| ವಾಸ | ಃ | ಕಲಬುರಗಿ |

(ಇಂದು ದಿನಾಂಕಃ 06-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಶ್ರೀ ವಿವಿಸಿ ವಕೀಲರಿಂದ ಃ**

ಸೇಡಂ ಪೋಲೀಸ ಠಾಣೆಯ ಗುನ್ನೆ ನಂಬರ 54/2021 ದಾಖಲಾದಾಗ ನಾನು ಸೇಡಂ CPI ಆಗಿದ್ದೆ. ಗುನ್ನೆ ನಂಬರ 54/2021 ರಲ್ಲಿ ಪಿರ್ಯಾದಿಯ ಪುರವಣಿ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಗುನ್ನೆ ಸ್ಥಳ ಪಂಚನಾಮೆ ಮಾಡಿದ್ದೇನೆ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅಪಘಾತ ಪಡಿಸಿದ ಮೋಟಾರು ಸೈಕಲನ್ನು RTO ರವರಿಂದ ಪರೀಕ್ಷೆಗೆ ಒಳಪಡಿಸಿ IMV ವರದಿ ಪಡೆದುಕೊಂಡಿರುತ್ತೇನೆ. ಮೃತ ಮೈನುದ್ದೀನ ರವರ PM ವರದಿಯನ್ನು ಪಡೆದುಕೊಂಡಿರುತ್ತೇನೆ. ತನಿಖೆ ಪೂರೈಸಿ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ. ಪಿರ್ಯಾದಿ ಪ್ರಕಾರ FIR ನಲ್ಲಿ ಆರೋಪಿಯ ಹೆಸರು ಮಹ್ಮದ ಗೌಸ್ ಪಟೇಲ ಎಂದು ನಮೂದಾಗಿದೆ ಎಂದರೆ ಸರಿ. ದೋಷಾರೋಪಣ ಪತ್ರದಲ್ಲಿ ಆರೋಪಿಯ ಹೆಸರು ಮಹೆಬೂಬ ತಂದೆ ಯಾಕುಬ್ ಸಾಬ ಬಳಿಗಾರ್ ಎಂದು ಇದೆ ಎಂದರೆ ಸರಿ. ಪಿರ್ಯಾದಿಯ ಪುರವಣಿ ಹೇಳಿಕೆ ಮತ್ತು ತನಿಖೆಯಲ್ಲಿ ಕಂಡು ಬಂದ ಸಂಗತಿಗಳ ಆಧಾರದ ಮೇಲೆ ಆರೋಪಿ ಎಂದು ಮಹೆಬೂಬ ರವರನ್ನು ದೋಷಾರೋಪಣ ಪತ್ರದಲ್ಲಿ ತೋರಿಸಿದ್ದೇನೆ. ಮಹೆಬೂಬರವರ ಬಳಿ DL ಇಲ್ಲ.

ಆರೋಪಿಯ ಹೆಸರನ್ನು ಬದಲಾವಣೆ ಮಾಡಿದ ಸಂದರ್ಭದಲ್ಲಿ ಮುನಿರಾಬೇಗಂ, ಶೆರಿನಾ ಬೇಗಂ, ಇಮಾಮ್ ಸಾಬ ಮತ್ತು ಸೈಪುದ್ದೀನ ಉಸ್ಮಾನ ರವರ ಹೇಳಿಕೆ ಮತ್ತು ಪಿರ್ಯಾದಿಯ ಪುರವಣಿ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ ಇಲಃ</u>**

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ.ಡಿ.ಪಿ ವಕೀಲರಿಂದಃ</u>**

ಮಹೆಬೂಬ ಯಾಕೂಬ್ ಸಾಬ್ ಬಳಿಗಾರ್ ಮಹ್ಮದ ಗೌಸ್ ರವರ ಬಳಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪಿರ್ಯಾದಿಯ ಪುರವಣಿ ಹೇಳಿಕೆ ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೆ ಠಾಣೆಯಲ್ಲಿ ಕುಳಿತು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮಹ್ಮದ ಗೌಸ್ ಪಟೇಲ ಹೇಳಿದಂತೆ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. FIR ನಲ್ಲಿ ಆರೋಪಿಯಂದು ನಮೂದಾಗಿದ್ದ ಮಹ್ಮದ ಗೌಸ್ ಬಳಿ DL ಇತ್ತು.

<u>ಮರು ವಿಚಾರಣೆ ಇಲ್ಲಃ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.